**ದಿನಾಂಕಃ 30–01–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲುಃ ಆರೋಪಿ ಪರ ಡಿಫೆನ್ಸ್ ಕೌನ್ಸಿಲ್ ರವರಿಂದ**

5. ನಾನು ಹಾಲಿ ನನ್ನ ತವರು ಮನೆಯಾದ ಕಲ್ಲಹಳ್ಳಿಯಲ್ಲಿ ವಾಸವಾಗಿರುತ್ತೇನೆ. ನನ್ನ ವಿವಾಹವಾಗಿ 9 ವರ್ಷ ಆಗಿರುತ್ತದೆ. ನನ್ನ ಅಕ್ಕ ಅಂಬಿಕಾ ರವರು ಮೃತಪಟ್ಟ ಕಾಲದಲ್ಲಿ ಸಹ ನಾನು ಕಲ್ಲಹಳ್ಳಿಯಲ್ಲೇ ವಾಸವಾಗಿದ್ದೆ. ನನ್ನ ಅಕ್ಕ ಅಂಬಿಕಾ ಮೃತಪಡುವ 3 ವರ್ಷ ಪೂರ್ವದಿಂದ ನಾನು ಕಲ್ಲಹಳ್ಳಿಯಲ್ಲಿ ವಾಸವಾಗಿದ್ದೆ. ಅಂಬಿಕಾ ಮೃತಪಟ್ಟಾಗ ಆಕೆಯ ವಿವಾಹ ಆಗಿ ಸುಮಾರು 12 ವರ್ಷ ಕಳೆದಿತ್ತು. ನಮ್ಮ ಅಕ್ಕ ಅಂಬಿಕಾ ಆರೋಪಿಯನ್ನು ವಿವಾಹ ಆದ ಕಾಲದಿಂದಲೂ ಆರೋಪಿತನ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ. ನನ್ನ ಅಕ್ಕ ಹಾಗೂ ನನ್ನ ಭಾವನಾದ ಚಂದ್ರಮೌಳಿ ರವರ ನಡುವೆ ಗಲಾಟೆಯಾಗಿದ್ದ ಕಾರಣದಿಂದ ನನ್ನ ಅಕ್ಕ ಕಲ್ಲಹಳ್ಳಿಯ ತಾಯಿ ಮನೆಯಲ್ಲಿ ವಾಸವಾಗಿದ್ದರು. ನನ್ನ ಅಕ್ಕ ಅಂಬಿಕಾ ರವರ ಮಗ ಈಗ ಆರೋಪಿತನ ಮನೆಯಲ್ಲಿಯೇ ಆರೋಪಿತನ ತಂದೆ ತಾಯಿಯವರ ಜೊತೆ ವಾಸವಾಗಿರುತ್ತಾನೆಂದರೆ ಸರಿ.

6. ನನ್ನ ಅಕ್ಕ ಅಂಬಿಕಾ ಗಾರ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದಳು. ಕಲ್ಲಹಳ್ಳಿಯ ನಮ್ಮ ತಾಯಿಯ ಮನೆಯಿಂದಲೇ ನನ್ನ ಅಕ್ಕ ಅಂಬಿಕಾ ಹಾಸನದ ಗಾರ್ಮೆಂಟ್ ಫ್ಯಾಕ್ಟರಿಗೆ ಬಾಡಿಗೆ ವ್ಯಾನಿನಲ್ಲಿ ಕೆಲಸಕ್ಕೆ ಹೋಗಿ ಬರುತ್ತಿದ್ದಳು. ನಾನೂ ಸಹ ನಮ್ಮ ತಾಯಿಯ ಮನೆಯಾದ ಕಲ್ಲಹಳ್ಳಿಯಲ್ಲೇ ವಾಸವಾಗಿದ್ದು ನಾನೂ ಸಹ ಬಾಡಿಗೆ ವ್ಯಾನಿನಲ್ಲಿಯೇ ಕಲ್ಲಹಳ್ಳಿಯಿಂದ ಹಾಸನದ ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗಿ ಬರುತ್ತಿದ್ದೆ. ನನ್ನ ಅಕ್ಕ ಅಂಬಿಕಾ ಬಾಡಿಗೆ ವ್ಯಾನನ್ನು ಆರೋಪಿತನಿಗೆ ಕೊಡಿಸಿದ್ದು ಆ ವ್ಯಾನ್ ಕೊಡಿಸಿದ ನಂತರ ನಾನು ಹಾಗೂ ನನ್ನ ಅಕ್ಕ ಅಂಬಿಕಾ ರವರು ಆರೋಪಿತನ ವ್ಯಾನಿನಲ್ಲೇ ಕಲ್ಲಹಳ್ಳಿಯಿಂದ ಹಾಸನದ

ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗಿ ಬರುತ್ತಿದ್ದೆವು. ಬೆಳಿಗ್ಗೆ 7.30 ಗಂಟೆ ಸಮಯಕ್ಕೆ ಕಲ್ಲಹಳ್ಳಿಯಿಂದ ಹೊರಟು ಸಂಜೆ ಸುಮಾರು 6 ಗಂಟೆ ಸಮಯಕ್ಕೆ ಕಲ್ಲಹಳ್ಳಿ ಗ್ರಾಮಕ್ಕೆ ವಾಪಸ್ ಬರುತ್ತಿದ್ದೆವು. ನನ್ನ ಅಕ್ಕ ಆರೋಪಿಗೆ ಕೊಡಿಸಿದ ವ್ಯಾನ್ ಆರೋಪಿಯ ಹೆಸರಿನಲ್ಲಿಯೇ ಇರುತ್ತದೆ.

7. ನಾನು ಗೋಕುಲ್ ದಾಸ್ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದು ನನ್ನ ಅಕ್ಕ ಅಂಬಿಕಾ ಜಾಕಿ ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಳು. ಹೊಳೇನರಸೀಪುರದ ಕಡೆಯಿಂದ ಬಂದಲ್ಲಿ ಗೋಕುಲ್ ದಾಸ್ ಗಾರ್ಮೆಂಟ್ ಫ್ಯಾಕ್ಟರಿ ಮೊದಲು ಸಿಗುತ್ತದೆ ಎಂದರೆ ಸರಿ. ಆನಂತರ ಜಾಕಿ ಗಾರ್ಮೆಂಟ್ ಫ್ಯಾಕ್ಟರಿ ಬರುತ್ತದೆ ಎಂದರೆ ಸರಿ. ಗೋಕುಲ್ ದಾಸ್ ಫ್ಯಾಕ್ಟರಿಯಿಂದ ಜಾಕಿ ಗಾರ್ಮೆಂಟ್ ಫ್ಯಾಕ್ಟರಿ 2-3 ಕಿ ಮೀ ದೂರದಲ್ಲಿದೆ ಅಂದರೆ ಅಷ್ಟು ದೂರದಲ್ಲಿ ಇರುವುದಿಲ್ಲ. ಈ ಎರಡೂ ಫ್ಯಾಕ್ಟರಿಗಳ ನಡುವಿನ ಅಂತರ ಸುಮಾರು ಒಂದರಿಂದ ಒಂದೂವರೆ ಕಿ ಮೀ ಮಾತ್ರ ಇರುತ್ತದೆ.

8. ದಿಃ17.07.2023 ರಂದು ಆರೋಪಿತನ ವ್ಯಾನ್ ಕೆಟ್ಟು ಹೋದ ನಂತರ ನಾನು ಕಲ್ಲಹಳ್ಳಿಗೆ ಹೋದೆ. ಆರೋಪಿ ಹಾಗೂ ಅಂಬಿಕಾ ಹಾಲಗೊಂಡನಹಳ್ಳಿಗೆ ಹೋದರು. ದಿಃ17.07.2023 ರಂದು ನಾನು ಹಾಗೂ ನನ್ನ ಅಕ್ಕ ಅಂಬಿಕಾ ಇಬ್ಬರೂ ಕಲ್ಲಹಳ್ಳಿಗೆ ಹೋಗಿದ್ದು ಆರೋಪಿ ಮಾತ್ರ ಬಸ್ಸಿನಲ್ಲಿ ಹೋಗಿರುತ್ತಾನೆ ಎಂದರೆ ಸರಿಯಲ್ಲ. ದಿಃ18.07.2023 ರಂದು ನಾನು ಹಾಗೂ ನನ್ನ ಅಕ್ಕ ಅಂಬಿಕಾ ಇಬ್ಬರೂ ಸೇರಿ ಒಟ್ಟಾಗಿ ಕಲ್ಲಹಳ್ಳಿಯಿಂದ ಹೊರಟು ಗಾರ್ಮೆಂಟ್ ಫ್ಯಾಕ್ಟರಿಗೆ ಬಂದಿದ್ದು ಸಂಜೆ ಸಹ ಒಟ್ಟಾಗಿ ಹಾಸನದಿಂದ ಕಲ್ಲಹಳ್ಳಿ ಗ್ರಾಮಕ್ಕೆ ವಾಪಸ್ ಬಂದಿರುತ್ತೇವೆಂದರೆ ಸರಿಯಲ್ಲ. ದಿಃ18.07.2023 ರಂದು ನನ್ನ ಅಕ್ಕ ಅಂಬಿಕಾ ನನ್ನಲ್ಲಿ ಆಕೆ ಹಾಗೂ ಆರೋಪಿತನ ನಡುವೆ

ನಡೆದಿರುತ್ತದೆ ಎನ್ನಲಾದ ಯಾವುದೇ ಗಲಾಟೆಯ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ದಿಃ18.07.2023ರ ಸಂಜೆ ನನ್ನ ಅಕ್ಕ ಅಂಬಿಕಾ ಆರೋಪಿತ ಹಾಗೂ ಆಕೆಯ ನಡುವೆ ಹಿಂದಿನ ದಿನ ಗಲಾಟೆ ಆಗಿರುವ ಬಗ್ಗೆ ನನ್ನಲ್ಲಿ ತಿಳಿಸಿದಳು.

9. ನಾನು ಮೊಬೈಲ್ ಫೋನ್ ಬಳಸುತ್ತೇನೆ. ನನ್ನ ಅಕ್ಕ ಅಂಬಿಕಾ ರವರು ಮೊಬೈಲ್ ಫೋನ್ ಬಳಸುತ್ತಿರಲಿಲ್ಲ. ನನ್ನ ಅಕ್ಕ ಅಂಬಿಕಾ ಹಾಗೂ ಆರೋಪಿತನ ನಡುವೆ ಯಾವುದೇ ಗಲಾಟೆ ಆಗಿದ್ದಲ್ಲಿ ನನ್ನ ಅಕ್ಕ ಅಂಬಿಕಾ ಕೂಡಲೇ ಫೋನಿನಲ್ಲಿ ಪೊಲೀಸರಿಗೆ ವಿಷಯ ತಿಳಿಸುತ್ತಿದ್ದು ಯಾವುದೇ ಗಲಾಟೆ ಆಗಿರದ ಕಾರಣ ನನ್ನ ಅಕ್ಕ ಪೊಲೀಸರಿಗೆ ಫೋನ್ ಮಾಡಿ ಯಾವುದೇ ವಿಷಯ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ನನ್ನ ಅಕ್ಕ ಅಂಬಿಕಾ ರವರಿಗೆ ಬೈದು ಹೊಡೆದಿರುವ ಬಗ್ಗೆ ದಿಃ19.07.2023 ರಂದು ನಾವು ಹಳ್ಳಿ ಮೈಸೂರು ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದೆವು. ಆರೋಪಿತ ಆತನ ವ್ಯಾನ್ ನಲ್ಲಿ ಅಂಬಿಕಾ ಬರಲಿಲ್ಲ ಎನ್ನುವ ಕಾರಣಕ್ಕೆ ಆಕೆಯ ಜೊತೆ ಗಲಾಟೆ ಮಾಡಿದ ಎನ್ನುವ ಬಗ್ಗೆ ಮಾತ್ರ ಅಂಬಿಕಾ ಪೊಲೀಸರಲ್ಲಿ ದೂರು ದಾಖಲಿಸಿದ್ದು ಆರೋಪಿತ ಆಕೆಗೆ ವಡವೆ, ಹಣ ಕೇಳಿ ಕಿರುಕುಳ ನೀಡಿರುತ್ತಾನೆ ಎನ್ನುವ ಬಗ್ಗೆ ಯಾವುದೇ ದೂರನ್ನು ಪೊಲೀಸರಲ್ಲಿ ದಾಖಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಅಂಬಿಕಾ ರವರ ದೂರಿನ ಮೇರೆಗೆ ಪೊಲೀಸರು ಆರೋಪಿಯನ್ನು ಠಾಣೆಗೆ ಕರೆದು ಹೊಡೆದು, ಬಡಿದು ಬುದ್ದಿವಾದ ಹೇಳಿ ಕಳುಹಿಸಿದರೂ ಸಹ ನನ್ನ ಅಕ್ಕ ಆರೋಪಿತನ ಜೊತೆ ಹೋಗದೆ ತಾಯಿಯ ಮನೆಗೆ ಹೋಗಿರುತ್ತಾರೆಂದರೆ ಆತನ ಜೊತೆ ಹೋದರೆ ಆರೋಪಿತ ಮತ್ತೆ ನನ್ನ ಅಕ್ಕ ಅಂಬಿಕಾ ರವರಿಗೆ ಹೊಡೆದು ಗಲಾಟೆ ಮಾಡಬಹುದು ಎಂದು ಭಾವಿಸಿದ ನನ್ನ ಅಕ್ಕ ಅಂಬಿಕಾ ಆರೋಪಿತನ ಜೊತೆ ಆತನ ಮನೆಗೆ ಹೋಗಲಿಲ್ಲ. ದಿಃ17.07.2023 ರಿಂದ

ದಿಃ20.07.2023 ರ 3 ದಿನಗಳ ಕಾಲ ನನ್ನ ಅಕ್ಕ ಅಂಬಿಕಾ ಕಲ್ಲಹಳ್ಳಿ ಗ್ರಾಮದಿಂದಲೇ ಹಾಸನದ ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ದಿಃ17.07.2023 ರಂದು ನನ್ನ ಅಕ್ಕ ಅಂಬಿಕಾ ಆರೋಪಿತನ ಮನೆಗೆ ಹೋಗಿದ್ದು ದಿಃ18.07.2023 ರಂದು ಆರೋಪಿತನ ಮನೆಯಿಂದಲೇ ಹಾಸನದ ಗಾರ್ಮೆಂಟ್ ಫ್ಯಾಕ್ಟರಿಗೆ ಬಂದಿರುತ್ತಾಳೆಂದು ಉತ್ತರಿಸಿರುತ್ತಾರೆ. ನನ್ನ ಅಕ್ಕ ಮೇಲೆ ಕಾಣಿಸಿದ 3 ದಿನಗಳ ಕಾಲ ಕಲ್ಲಹಳ್ಳಿಯಿಂದಲೇ ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗಿರುವ ಕಾರಣ ನನ್ನ ಅಕ್ಕನ ಬಳಿಯೇ ಐಡಿ ಕಾರ್ಡು ಹಾಗೂ ಮಾಸ್ಕು ಇತ್ತು ಎಂದರೆ ಸರಿಯಲ್ಲ. ನನ್ನ ಅಕ್ಕ ಅಂಬಿಕಾ ಆರೋಪಿತನಿಗೆ ಆಕೆಯ ಐಡಿ ಕಾರ್ಡು ಹಾಗೂ ಮಾಸ್ಕು ತರಲು ಯಾವುದೇ ಫೋನ್ ಕರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಆರೋಪಿತನಿಗೆ ಫೋನ್ ಮಾಡಿರುತ್ತಾರೆ ಎನ್ನುವ ಬಗ್ಗೆ ನಾನು ಪೊಲೀಸರಲ್ಲಿ ಯಾವುದೇ ಕಾಲ್ ಡೀಟೈಲ್ಸ್ ನೀಡಿರುವುದಿಲ್ಲ. ನನ್ನ ಅಕ್ಕ ಅಂಬಿಕಾ ಆರೋಪಿತನಿಗೆ ಫೋನ್ ಮಾಡಿ ಯಾವುದೇ ಐಡಿ ಕಾರ್ಡು ಹಾಗೂ ಮಾಸ್ಕು ತರಲು ಹೇಳದೇ ಇದ್ದರೂ ಸಹ ಆರೋಪಿತನ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸರಿಯಲ್ಲ.

10. ದಿಃ20.07.2023 ರಂದು ಬೆಳಿಗ್ಗೆ ನಾನು ಬಸ್ಸಿನಿಂದ ಮೊದಲು ಗೋಕುಲ್ ದಾಸ್ ಗಾರ್ಮೆಂಟ್ ಹತ್ತಿರ ಇಳಿದಿದ್ದು ನಾನು ಕೆ ಐ ಡಿ ಬಿ ಸರ್ಕಲ್ ನಲ್ಲಿ ಬಸ್ಸಿನಿಂದ ಇಳಿದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನಾನು ಹಾಗೂ ನನ್ನ ಅಕ್ಕ ಇಬ್ಬರೂ ಕೆ ಐಡಿ ಬಿ ಸರ್ಕಲ್ ನಲ್ಲಿ ಬಸ್ಸಿನಿಂದ ಇಳಿದಿದ್ದು ಆ ಸರ್ಕಲ್ ನಿಂದ ನಾನು ಗೋಕುಲ್ ದಾಸ್ ಫ್ಯಾಕ್ಟರಿಯ ಕಡೆ ನಡೆದು ಹೋದೆ ಎಂದು ಉತ್ತರಿಸಿರುತ್ತಾರೆ. ನಾನು ಹಾಗೂ ನನ್ನ ಅಕ್ಕ ಅಂಬಿಕಾ ಕೆಐಡಿಬಿ ಸರ್ಕಲ್ ನಲ್ಲಿ ಬಸ್ಸಿನಲ್ಲಿ ಇಳಿದ ಕಾಲದಲ್ಲಿ ಅಲ್ಲಿದ್ದ

ಆರೋಪಿಯನ್ನು ನೋಡಿ ನನ್ನ ಅಕ್ಕ ಆತನ ಬಳಿ ಹೋದಳು ನಾನು ನನ್ನ ಗಾರ್ಮೆಂಟ್ ಕಡೆಗೆ ಹೋದೆ.

11. ನನ್ನ ಚಿಕ್ಕಪ್ಪ ಚಂದ್ರಶೇಖರ್ ರವರು ನನಗೆ ಮಧ್ಯಾಹ್ನ 3 ಗಂಟೆ ಸಮಯದಲ್ಲಿ ನನ್ನ ಅಕ್ಕ ಅಂಬಿಕಾ ರವರು ಕೊಲೆಯಾದ ಬಗ್ಗೆ ತಿಳಿಸಿದ್ದು ನಾನು ಮಧ್ಯಾಹ್ನ ಸುಮಾರು 3.30 ಗಂಟೆ ಸಮಯದಲ್ಲಿ ಗಾರ್ಮೆಂಟ್ ಫ್ಯಾಕ್ಟರಿಯಿಂದ ಹೊರಟಿರುತ್ತೇನೆ. ನಾನು ಗಾರ್ಮೆಂಟ್ ಫ್ಯಾಕ್ಟರಿಯಿಂದ ಹೊರಟು ಅಂಕನಹಳ್ಳಿ ಫಾರೆಸ್ಟ್ ಪ್ರದೇಶಕ್ಕೆ ಹೋಗಿರುತ್ತೇನೆ. ನಾನು ನನ್ನ ಅಕ್ಕ ಅಂಬಿಕಾರವರ ಶವ ಬಿದ್ದಿದ್ದ ಸ್ಥಳಕ್ಕೆ ಎಷ್ಟು ಗಂಟೆ ಸಮಯಕ್ಕೆ ಹೋದೆ ಎಂದು ನೆನಪಿಲ್ಲ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ನನ್ನ ಅಕ್ಕ ಅಂಬಿಕಾ ರವರ ಶವವನ್ನು ಆಸ್ಪತ್ರೆಗೆ ತರಲಾಗಿತ್ತು ಎಂದರೆ ಸರಿಯಲ್ಲ. ನಾನು ಕೃತ್ಯ ನಡೆದ ಸ್ಥಳದಲ್ಲಿ ನನ್ನ ಅಕ್ಕ ಅಂಬಿಕಾ ರವರ ಶವವನ್ನು ನೋಡಿರುತ್ತೇನೆ. ನಾನು ನನ್ನ ಅಕ್ಕನ ಮೃತದೇಹವನ್ನು ನೋಡಿದಾಗ ಆಕೆಯ ಕತ್ತಿನಲ್ಲಿ ತಾಳಿ ಹಾಗೂ ಕಾಲಿನಲ್ಲಿ ಕಾಲುಗೆಜ್ಜೆ ಹಾಗೂ ಕಾಲುಂಗುರ ಇತ್ತು. ನಾನು ನನ್ನ ಅಕ್ಕನ ಶವ ನೋಡಿದ ಕಾಲದಲ್ಲಿ ಸ್ಥಳದಲ್ಲಿ ತುಂಬಾ ಜನರು ಸೇರಿದ್ದರು. ನನ್ನ ಅಕ್ಕನ ಶವ ಬಿದ್ದಿದ್ದ ಸ್ಥಳ ಹಾಸನ ಮೈಸೂರು ರಸ್ತೆಯ ಎಸ್ ಅಂಕನಹಳ್ಳಿ ಫಾರೆಸ್ಟಿನ ಪ್ರದೇಶ ಆಗಿರುತ್ತದೆ. ಅಂಕನಹಳ್ಳಿ ಫಾರೆಸ್ಟ್ ಸಮೀಪ ಇರುವ ಹಾಸನ ಮೈಸೂರು ರಸ್ತೆಯಲ್ಲಿ ಹೆಚ್ಚಿನ ವಾಹನ ಸಂಚಾರ ಇರುತ್ತದೆ ಎಂದರೆ ಸರಿ.

12. ನನ್ನ ಅಕ್ಕ ಅಂಬಿಕಾ ಮೃತಪಟ್ಟ 2 ದಿನಗಳ ನಂತರ ಚಾಸಾ–4 ಪುನೀತ್ ರವರು ನನ್ನನ್ನು ಗೋಕುಲ್ ದಾಸ್ ಗಾರ್ಮೆಂಟ್ ಫ್ಯಾಕ್ಟರಿಯ ಮುಂದೆ ಭೇಟಿಯಾಗಿ ಅಂಬಿಕಾ ಹಾಗೂ ಚಂದ್ರಮೌಳಿ ರವರು ಬಸ್ಸಿನಲ್ಲಿ ಜಗಳ ಆಡುತ್ತಿದ್ದ ಬಗ್ಗೆ ಅವರು ನೋಡಿರುವ ಬಗ್ಗೆ ನನಗೆ ತಿಳಿಸಿದರು. ನನ್ನ ಅಕ್ಕ ಮೃತಪಟ್ಟ ಕಾರಣದಿಂದ ನಾನು ನನ್ನ ಅಕ್ಕ

ಮೃತಪಟ್ಟ 2 ದಿನಗಳ ನಂತರ ನಾನು ಫ್ಯಾಕ್ಟರಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾನು ರಜೆ ಹಾಕಲು ಗೋಕುಲ್ ದಾಸ್ ಫ್ಯಾಕ್ಟರಿಗೆ ಹೋಗಿದ್ದೆ. ಚಾಸಾ-4 ಪುನೀತ್ ರವರು ನನ್ನನ್ನು ಗೋಕುಲ್ ದಾಸ್ ಗಾರ್ಮೆಂಟ್ ಮುಂದೆ ಭೇಟಿಯಾಗಿ ಯಾವುದೇ ವಿಷಯ ತಿಳಿಸದೇ ಇದ್ದರೂ ಸಹ ನಾನು ಹಾಗೂ ಚಾಸಾ-4 ಪುನೀತ್ ರವರು ಸೇರಿ ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ಪೊಲೀಸರಲ್ಲಿ ಸುಳ್ಳು ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ.

13. ದಿ:19.07.2023 ರಂದು ನನ್ನ ಅಕ್ಕ ಆರೋಪಿತನ ವಿರುದ್ಧ ಪೊಲೀಸರಲ್ಲಿ ದೂರು ನೀಡಿದ್ದು ಅವರ ನಡುವೆ ಸಂಬಂಧ ಸರಿ ಇಲ್ಲದ ಕಾರಣ ಮರುದಿನ ನನ್ನ ಅಕ್ಕ ಅಂಬಿಕಾ ಹಾಗೂ ಆರೋಪಿತ ನಾನು ತಿಳಿಸಿರುವಂತೆ ಹಾಸನದ ಕೆಐಡಿಬಿ ಸರ್ಕಲ್ ನಲ್ಲಿ ಭೇಟಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಅಂಬಿಕಾನ ಸಾವಿಗೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ನನ್ನ ಅಕ್ಕನ ಬಳಿ ವಡವೆ ಹಾಗೂ ಹಣವನ್ನು ಕೇಳಿ ಆಕೆ ಕೊಡದ ಕಾರಣ ಆಕೆಯನ್ನು ಕೊಲೆ ಮಾಡಿರುತ್ತಾನೆಂದು ನಾನು ಆರೋಪಿತನ ವಿರುದ್ದ ಹೊಂದಿರುವ ದ್ವೇಷದ ಕಾರಣದಿಂದ ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನ್ನ ಅಕ್ಕ ಅಂಬಿಕಾ ರವರಿಗೆ ವಡವೆ ಹಾಗೂ ಹಣವನ್ನು ನೀಡುವಂತೆ ಕಿರುಕುಳ ನೀಡಿದ್ದೇ ಆಗಿದ್ದಲ್ಲಿ ನನ್ನ ಅಕ್ಕ ಪೊಲೀಸರಲ್ಲಿ ದಿ:19.07.2023 ರಂದು ದಾಖಲಿಸಿರುವ ದೂರಿನಲ್ಲಿ ತಿಳಿಸುತ್ತಿದ್ದು ಈ ಬಗ್ಗೆ ದೂರಿನಲ್ಲಿ ತಿಳಿಸದೇ ಇರುವ ಕಾರಣ ನಾನು ತಿಳಿಸಿರುವಂತೆ ಆರೋಪಿತ ನನ್ನ ಅಕ್ಕ ಅಂಬಿಕಾ ರವರಿಗೆ ಯಾವುದೇ ಕಿರುಕುಳ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

14. ಆರೋಪಿತ ತನ್ನ ಮೇಲೆ ಅನುಕಂಪ ಬರಲಿ ಎನ್ನುವ ಕಾರಣದಿಂದ ನನ್ನ

ಅಕ್ಕ ಬೇರೊಬ್ಬರ ಜೊತೆ ಬೈಕಿನಲ್ಲಿ ಹೋಗುತ್ತಿದ್ದುದನ್ನು ನೋಡಿ ಆತ ಅನುಮಾನ ಬಂದು ಕೊಲೆ ಮಾಡಿರುತ್ತಾನೆ ಎಂದು ಹೇಳಿರುತ್ತಾನೆ ಎಂದು ನಾನು ಸೃಷ್ಟಿಸಿದ ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿಯಲ್ಲ. ಮೇಲೆ ಕಾಣಿಸಿದ ಸಂಗತಿಗಳನ್ನು ನಾನು ಹಾಗೂ ಪೊಲೀಸರು ಸೃಷ್ಟಿಸಿಕೊಂಡಿರುತ್ತೇವೆಂದರೆ ಸರಿಯಲ್ಲ. ಆರೋಪಿತ ಪೊಲೀಸ್ ಠಾಣೆಗೆ ಹೋಗಿಲ್ಲ ಹಾಗೂ ನನ್ನ ಅಕ್ಕ ಅಂಬಿಕಾ ರವರ ಕೊಲೆಯ ಬಗ್ಗೆ ಯಾವುದೇ ಹೇಳಿಕೆಯನ್ನು ಪೊಲೀಸ್ ಠಾಣೆಯಲ್ಲಿ ನೀಡಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಅಂಬಿಕಾ ರವರ ಮೃತದೇಹ ಪತ್ತೆಯಾದ ನಂತರ ಮನೆಯಲ್ಲಿದ್ದ ಆರೋಪಿಯನ್ನು ಪ್ರಕರಣದ ಬಗ್ಗೆ ವಿಚಾರಣೆ ಮಾಡಲು ಠಾಣೆಗೆ ಕರೆತಂದು ಆತನ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಆರೋಪಿತನಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಅಂಬಿಕಾ ಆರೋಪಿತನ ವ್ಯಾನಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗದೆ ಬೇರೆ ವ್ಯಕ್ತಿಗಳ ಮೋಟಾರು ಬೈಕಿನಲ್ಲಿ ಗಾರ್ಮೆಂಟ್ ಫ್ಯಾಕ್ಟರಿಗೆ ಹೋಗಿ ಬರುತ್ತಿದ್ದಳು ಎಂದರೆ ಸರಿಯಲ್ಲ. ನನ್ನ ಅಕ್ಕ ಬೈಕಿನಲ್ಲಿ ಫ್ಯಾಕ್ಟರಿಗೆ ಹೋಗುತ್ತಿದ್ದ ವ್ಯಕ್ತಿಗಳ ಜೊತೆ ಅಕ್ರಮ ಸಂಬಂಧ ಹೊಂದಿದ್ದಳು ಎಂದರೆ ಸರಿಯಲ್ಲ. ನನ್ನ ಅಕ್ಕ ಅಂಬಿಕಾ ರವರ ಅಕ್ರಮ ಸಂಬಂಧದಿಂದ ಆಕಯ ಕೊಲೆಯಾಗಿದ್ದರೂ ಸಹ ನಾನು ಆರೋಪಿತನ ವಿರುದ್ದ ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

15. ನಿಪಿ-5 ಹಾಗೂ 6 ವಡವೆ ಚೀಟಿಗಳು ಆರೋಪಿತನ ಹೆಸರಿನಲ್ಲಿ ಇರುತ್ತವೆಂದರೆ ಸರಿ. ನಿಪಿ-7 ಮುಚ್ಚಳಿಕೆ ಆರೋಪಿತ 2021 ರಲ್ಲಿ ಬರೆದು ನೀಡಿದ ಮುಚ್ಚಳಿಕೆ ಎಂದರೆ ಸರಿ. ನನ್ನ ಅಕ್ಕ ಅಂಬಿಕಾ ಆರೋಪಿತನಿಗೆ ಯಾವುದೇ ಆಟೋರಿಕ್ಷಾ ಕೊಡಿಸಿರಲಿಲ್ಲ ಹಾಗೂ ಆರೋಪಿತನೇ ಆಟೋರಿಕ್ಷಾವನ್ನು ಖರೀದಿಸಿರುತ್ತಾನೆಂದರೆ

ಸರಿಯಲ್ಲ. ನಿಪಿ–9 ರಿಂದ 12 ಫೋಟೋಗಳನ್ನು ಪೊಲೀಸರು ನನ್ನ ಅಕ್ಕನ ಮೃತದೇಹ ಪತ್ತೆಯಾದ ದಿನವೇ ತೆಗೆದಿರುತ್ತಾರೆ. ಸದರಿ ಫೋಟೋಗಳಲ್ಲಿ ನನ್ನ ಇರುವಿಕೆ ಕಂಡು ಬರುವುದಿಲ್ಲ ಎಂದರೆ ಸರಿ. ಪೊಲೀಸರು ಆರೋಪಿಯನ್ನು ಸ್ಥಳಕ್ಕೆ ವಿಚಾರಣೆಗಾಗಿ ಕರೆಸಿ ಆತನನ್ನು ಬಲವಂತವಾಗಿ ನಿಲ್ಲಿಸಿ ಫೋಟೋಗಳನ್ನು ತೆಗೆಸಿರುತ್ತಾರೆಂದರೆ ಸರಿಯಲ್ಲ. ಹೊಳೇನರಸೀಪುರ ಠಾಣೆಗೆ ಹೋಗಿ ನಾನು ಪೊಲೀಸರಲ್ಲಿ ನನ್ನ ಹೇಳಿಕೆ ನೀಡಿರುತ್ತೇನೆ. ನಾನು ಪೊಲೀಸರಲ್ಲಿ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆಗೂ ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಆರೋಪಿತನ ವಿರುದ್ಧ ದ್ವೇಷದಿಂದ ಸುಳ್ಳು ಸಂಗತಿಗಳನ್ನು ಸೃಷ್ಟಿಸಿ ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿಯಲ್ಲ. ನಿಪಿ–5 ಹಾಗೂ 6 ವಡವೆ ಚೀಟಿಗಳನ್ನು ಅರೋಪಿತನ ಮನೆಯಿಂದ ತಂದು ಪೊಲೀಸರಿಗೆ ನೀಡಿರುತ್ತೇನೆ ಎಂದರೆ ಆರೋಪಿತನ ತಂದೆ ವಡವೆ ಚೀಟಿಗಳನ್ನು ನನಗೆ ನೀಡಿದ್ದು ಅದನ್ನು ಪೊಲೀಸರಿಗೆ ನೀಡಲಾಗಿದೆ. ನಿಪಿ–8 ಆರ್ ಸಿ ಪುಸ್ತಕ ನಮ್ಮ ತಾಯಿಯ ಮನೆಯಲ್ಲಿ ಇತ್ತು. ನಿಪಿ–8 ಆರ್ ಸಿ ಪುಸ್ತಕವನ್ನು ಸಹ ಆರೋಪಿತನ ಮನೆಯಿಂದ ತಂದು ಪೊಲೀಸರಿಗೆ ನೀಡಿರುತ್ತೇನೆಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.